ಸದರೀ ದರಖಾಸ್ತುದಾರನಾದ ವೀರತ್ತಪ್ಪನ ಅರ್ಜೀಯನ್ನು 1884ನೇ ಇಸವಿ ಡಿಸಂಬರ್ ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೀರಭದ್ರಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ನವಂಬರ್ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮದಸ್ತ ಖತ್ತೊಡನೆ ಕೊಡೋಣಾಗಿದೆ.

ವಿ. ಎಸ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ಫ್ರೆಂಚ್ ರಾಕ್ಸ್ ಸಬ್ ಡಿವೀಜ್ಞ್.

ತಾರೀಖು 25ನೇ ನವಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಮಂಡ್ಯದ ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಬೇವಾರಸಾಗಿ ಯಿರತಕ್ಕ ಕೆಳಗೆ ವಿವರಿಸುವ ದಸ್ತಾವೇಜನ್ನು ಹಾಜರ್ ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅಧಿಕಾರ ಹೊಂದಿದ ಮುತಾಲೀಕರಾಗಲಿ ಹಕ್ಕುದಾರರಾಗಲಿ ಈ ನೋಟೀಸ್ ತಾರೀಖು ಲಾಗಾಯತು ಒಂದು ತಿಂಗಳಲ್ಲಿ ಸದರೀ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ವಾಪಸ್ ಪಡಿಯದೆ ಹೋದರೆ ರಿಜಿಸ್ಟ್ರೇಷನ್ ನಿಬಂಧನೇ ಮೇರೆ ನಾಶಪಡಿಸುವದು.

ಸಬ್ ರಿಜಿಸ್ಟ್ರಾರ್ ಆಫೀಸಿನ ಹೆಸರು.	ದಸ್ತಾವೇಜು ನಂಬರು.	ದಸ್ತಾವೇಜು ಬರದು ಕೊಟ್ಟವನ ಹೆಸರು ವಾ ಸಸ್ಥಾನ.	ದಸ್ತಾವೇಜು ಬರಿಸಿ ಕೊಂಡವನ ಹೆಸರು ವಾ ಸಸ್ಥಾನ.	ದಸ್ತಾವೇಜು ತಾರೀಖು.	ರಿಜಿಸ್ಟ್ರು ಮಾಡಿದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
ನಂಜನಗೂಡು ಸಬ್ ರಿಜಿಸ್ಟ್ರಾರ್ ಆಫೀಸ್.	117 ——— 1882—83	ಚಿಂಣೆಪೆದ ತಿರುಮಲ ಶೆಟ್ಟಿ, ಹಾಗಲಹಳ್ಳಿ ಗ್ರಾಮದಲ್ಲಿ ವಾಸ	ಚುಂಚನಹಳ್ಳಿ ಗ್ರಾಮದ ಸಿದ್ದೇಗೌಡ	14—11—82	15—11—82	ಹಾಗನಹಳ್ಳಿ ಗ್ರಾಮದಲ್ಲಿ ದೊಡ್ಡಕೆರೆ ವಳಗೆರೆ ತರೀ ಜಂಗಾರ್ ಜಮೀನು (300) ರೂಪಾಯಿನ ಭೋಗ್ಯ ಪತ್ರ.

ವಿ. ಪಿ. ಮಾಧವರಾವ್,
ರಿಜಿಸ್ಟ್ರಾರ್.

ನಗರ ಡಿವೀರ್ಜ್.

ನಗರ ಡಿವೀರ್ಜ್ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ರ್ 1884ನೇ ಇಸವಿ ಸಿವಿಲ್ ಮಿಸಲೇನಿಯಸ್ ಕೇಸ್ ನಂಬರ್ 97.

ದಿವಾಳಿಯಾದ ಡಿಕ್ರಿ ದೇಣೇದಾರ ನಾಗರ ತಾಲ್ಲೂಕು ಕೆಳದಿ ಮೂಗಣಿ ಬಂದಗದ್ದೆ ವಾಸಸ್ಥ ಮಾನನ ವಿಷಯದಲ್ಲಿ—

ಈ ವಿಷಯವು ನಗರ ಡಿವೀರ್ಜ್ ಡಿಸ್ಟ್ರಿಕ್ಟ್ ಜಡ್ಜ್ರ ಕೋರ್ಟು ರೂಬರೂ ದಿವಾಳಿಯಾದ ಮಾನನ ಸಮಕ್ಷಮದಲ್ಲಿಯೂ ಮತ್ತು ದಿವಾಳಿದಾರನ ಲೇಣೇದಾರರಾದ ನಾಗರ ತಾಲ್ಲೂಕು ಕೆಳದಿ ಮೂಗಣಿ ಬಂದಗದ್ದೆ ವಾಸಸ್ಥರು ಯಜ್ಞಂಭಟ್ಟರ ದೇವರಭಟ್ಟರ ತರಫ 1ನೇ ತರಗತಿ ಪ್ಲೀಡರ್ ಮೆ॥ ಕೆ. ರಾಮರಾಯರ ಯದುರಾಗಿಯೂ ದರಿಯಾಫ್ತ ಮಾಹಲ್ಪಟ್ಟಿತು ಮತ್ತು ಇದೇ ವಿಷಯದಲ್ಲಿ ಸ್ರ್ 1884ನೇ ಇಸವಿ ನವಂಬರ್ 19ನೇ ತಾರೀಖಿನಲ್ಲಿ ಈ ಕೋರ್ಟಿನಿಂದ ಮಾಡಲ್ಪಟ್ಟ ಹುಕ್ಕುಂ ಮೇರಿಗೆ ಪಟ್ಟೀಯಲ್ಲಿ ಕಂಡ ಯಾವ ಸಾಲಗಳಿಗೂ ಅರ್ಜ ದಿವಾಳಿಯಾದವನನ್ನ ದಸ್ತಗಿರಿ ಮಾಡಿ ಕೈದು ಮಾಡುವದರ ಪಕಿಯಿಂದ ಬಿಡುಗಡೇ ಮಾಡಿ ಇರುವದಾಗಿ ಇದರಿಂದ ಹುಕ್ಕುಂ ಮಾಡಲ್ಪಟ್ಟು ಯಿದೆ.

1884ನೇ ಇಸವಿ ನವಂಬರ್ ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.